ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ) ಹೌದು ಮಾಸಿಕ ರೂ 500/– ನೀಡಲಾಗುತ್ತಿದೆ

ಆ) 9875 ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ

ಇ) ಇಲ್ಲ

ರಾಜ್ಯದಲ್ಲಿನ ಅನುದಾನ ರಹಿತ ಖಾಸಗಿ ಶಾಲೆಗಳಿಗೆ ಅನುದಾನ ನೀಡಿಕೆ

118 (502) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನುದಾನ ರಹಿತ ಖಾಸಗಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ,

ಆ) ಈ ಶಾಲೆಗಳಿಗೆ ಅನುದಾನ ಯಾವಾಗ ನೀಡಲಾಗುವುದು, ಈ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಸಂಖ್ಯೆ 5552 ಅನುದಾನ ರಹಿತ ಪ್ರೌಢಶಾಲೆಗಳ ಸಂಖ್ಯೆ 4049 (ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ದಿ 01 06 1987 ರಂದು ಹಾಗೂ ನಂತರ ಪ್ರಾರಂಭಿಸಲಾದ ಖಾಸಗಿ ಪ್ರಾಥಮಿಕ / ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಂಸ್ಥೆಗಳ ವತಿಯಿಂದ ಪ್ರಾರಂಭಿಸಿದ ಶಾಲೆಗಳಿಗೆ ಸಂಬಂಧಿಸಿದಂತೆ ವೇತನಾನುದಾನಕ್ಕೆ ಒಳಪಡಿಸಲು ಪರಿಗಣಿಸಲು ದಿ 31 03 1992 ಕಟ್ ಆಫ್ ದಿನಾಂಕವಾಗಿದೆ)

ಇ) ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಆಯಾ ಶಾಲೆಗಳ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ

ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿವರ

ಕ್ರ ಸಂ	ಜಿಲ್ಲೆ	ಪ್ರಾಥಮಿಕ ಶಾಲೆಗಳ ಸಂಖ್ಯೆ	ಪ್ರೌಢ ಶಾಲೆಗಳ ಸಂಖ್ಯೆ
1	2	3	4
1	ಬೆಂಗಳೂರು ದಕ್ಷಿಣ	536	516
2	ಬೆಂಗಳೂರು ಉತ್ತರ	362	439
3	ಬೆಂಗಳೂರು ಗ್ರಾಮಾಂತರ	171	168
4	ಚಿತ್ರದುರ್ಗ	146	169
5	ದಾವಣಗೆರೆ	162	57
6	ಶಿವಮೊಗ್ಗ	223	125
7	ಕೋಲಾರ	187	194

1	2	3	4
8	ಕೋಲಾರ ಉತ್ತರ	130	194
9	ಮೈಸೂರು	271	240
10	ಚಾಮರಾಜನಗರ	63	59
11	ತುಮಕೂರು	133	192
12	ತುಮಕೂರು ಉತ್ತರ	72	–
13	ಮಂಡ್ಯ	181	138
14	ಹಾಸನ	193	155
15	ಚಿಕ್ಕಮಗಳೂರು	92	52
16	ಕೊಡಗು	45	38
17	ದಕ್ಷಿಣ ಕನ್ನಡ	107	111
18	ಉಡುಪಿ	54	58
19	ಬೆಳಗಾಂ	291	246
20	ಬೆಳಗಾಂ ಉತ್ತರ	263	–
21	ಬಿಜಾಪುರ	598	111
22.	ಬಾಗಲಕೋಟೆ	164	98
23	ಧಾರವಾಡ	104	85
24	ಗದಗ್	76	68
25	ಹಾವೇರಿ	70	82
26	ಉತ್ತರ ಕನ್ನಡ	53	69
27	ಗುಲ್ಬರ್ಗ	191	233
28	ಗುಲ್ಬರ್ಗ ಉತ್ತರ	140	–
29	ಬಳ್ಳಾರಿ	196	110
30	ರಾಯಚೂರು	105	105
31	ಕೊಪ್ಪ	76	48
32	ಬೀದರ್	95	143
	ಒಟ್ಟು	5,552	4 049

ಧಾರವಾಡ ಹಿರೇಕೆರೆಯ ಸಂರಕ್ಷಣೆ

119 (503) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ವೈದ್ಯಕೀಯ ಶಿಕ್ಷಣ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ಹಿರೇಕೆರೆಗೆ ನಗರದ ಕಲ್ಮಶ ನೀರು ಬಂದು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ